# ‘ಹುಲಿಯ’ನ ಹಂಬಲ

‘ಮಲೆಗಳಲ್ಲಿ ಮದುಮಗಳು’ ನಾಟಕದಲ್ಲಿ ‘ಹುಲಿಯ’ನಾಗಿ ಹೆಸರು ಮಾಡಿದ ಅನಿಲ್, ಕೆಲವು ಸಿನಿಮಾಗಳಲ್ಲಿ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಿನಿಮಾರಂಗದಲ್ಲಿ ‘ಉತ್ತಮ ಕಲಾವಿದ’ನಾಗಿ ತಮ್ಮನ್ನು ನಿರೂಪಿಸಿಕೊಳ್ಳುವ ಹಂಬಲದೊಂದಿಗೆ ಮುನ್ನಡೆದಿದ್ದಾರೆ.

■ ಸುಮಲತಾ ಎನ್

ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯನ್ನು ಸಿ. ಬಸವಲಿಂಗಯ್ಯ ಅವರು ನಾಟಕ ರೂಪಕ್ಕೆ ತಂದಾಗ ಅದರಲ್ಲಿ ‘ಹುಲಿಯ’ ಎಂಬ ನಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದವರು ಅನಿಲ್. ನಾಯಿ ಪಾತ್ರವನ್ನು ಯಾರು ಗುರುತು ಹಿಡಿಯುತ್ತಾರೆ ಎಂದುಕೊಂಡೇ ನಾಟಕಕ್ಕೆ ಬಣ್ಣ ಹಚ್ಚಿದ್ದ ಅವರಿಗೆ ಆ ಪಾತ್ರ ಮೆಚ್ಚುಗೆಯ ಮಹಾಪೂರವನ್ನೇ ಹರಿಸಿತ್ತು. ಅಲ್ಲಿಂದ ತಮ್ಮ ಹೆಸರಿನೊಂದಿಗೆ ‘ಹುಲಿಯ’ ಎಂಬ ಹೆಸರನ್ನೂ ಸೇರಿಸಿಕೊಂಡರು. ನಟನೆಯೆಡೆಗೆ ಮೊದಲಿನಿಂದಲೂ ಅವರೊಳಗಿದ್ದ ಆಕರ್ಷಣೆ ‘ಹುಲಿಯ’ನಿಂದ ಮತ್ತಷ್ಟು ಹುರುಪು ಪಡೆದುಕೊಂಡಿತು.

ಮೈಸೂರಿನ ಅನಿಲ್ ಅವರಿಗೆ ಶಾಲಾ ದಿನಗಳಲ್ಲಿಯೇ ಸಿನಿಮಾ ನೋಡುವ ಹುಚ್ಚು ಹಚ್ಚಿಕೊಂಡಿತ್ತು. ಆ ಹುಚ್ಚು ಅವರಲ್ಲಿ ನಟಿಸಬೇಕೆಂಬ ಆಸೆ ಹುಟ್ಟುಹಾಕಿತ್ತು. ಇದಕ್ಕೆ ಇಂಬು ನೀಡುವಂತೆ, ನಟ ಮಂಡ್ಯ ರಮೇಶ್ ಅವರ ನಟನಾ ತಂಡ ಮೈಸೂರಿನಲ್ಲಿ ನಾಟಕ ಶಿಬಿರ ಹಮ್ಮಿಕೊಂಡಾಗ ಎರಡು ನಾಟಕಗಳಲ್ಲಿ ಅಭಿನಯಿಸುವ ಅವಕಾಶ ಅನಿಲ್ ಅವರಿಗೆ ಒದಗಿಬಂದಿತ್ತು. ನಾಟಕಕ್ಕೆ ಬಣ್ಣ ಹಚ್ಚಿದ ನಂತರ ನಟನೆಯ ಆಸೆಗೆ ರೆಕ್ಕೆ ಮೂಡಿತ್ತು.

ನಾಟಕದ ಮೇಲಿನ ಪ್ರೀತಿಯಿಂದ ಮನೆ ಬಿಟ್ಟು ಬಂದ ಪ್ರಸಂಗವೂ ನಡೆಯಿತು.

‘‘ಮನೆಯಲ್ಲಿ ನಾಟಕ ಎಂದರೆ ಅಷ್ಟಕ್ಕಷ್ಟೆ. ಚೆನ್ನಾಗಿ ಓದಬೇಕು ಎನ್ನುತ್ತಿದ್ದರು. ರಿಹರ್ಸಲ್‌ಗೆ ಕದ್ದುಮುಚ್ಚಿ ಹೋಗಿಬರುತ್ತಿದ್ದೆ. ಒಂದು ದಿನ ಗೊತ್ತಾಗಿ ಸರಿಯಾಗಿ ಒದೆ ತಿಂದೆ. ಮನೆ ಬಿಟ್ಟು ಬಂದುಬಿಟ್ಟೆ. ಸೀದಾ ಹೋಗಿದ್ದು ಮಂಡ್ಯ ರಮೇಶ್ ಅವರ ಮನೆಗೆ. ‘ಮೊದಲು ನೀನು ಶಿಕ್ಷಣ ಮುಗಿಸು ಆಮೇಲೆ ನೋಡೋಣ’ ಎಂದು ಬುದ್ಧಿವಾದ ಹೇಳಿ ಕಳುಹಿಸಿದರು’’ ಎಂದು ನಗುತ್ತಲೇ ಮೆಲುಕು ಹಾಕಿದರು ಅನಿಲ್.

ಕ್ರೀಡೆಯಲ್ಲಿಯೂ ಮುಂದಿದ್ದ ಅವರು, ಲಾಂಗ್ ಡಿಸ್ಟನ್ಸ್ ರನ್ನರ್ ಆಗಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದರು. ಪದವಿ ಓದಿಗೆ ಸಂಜೆ ಕಾಲೇಜು ಸೇರಿದರು. ಆದರೆ ಮನಸ್ಸು ಮಾತ್ರ ಬಯಸುತ್ತಿದ್ದುದು ಸಿನಿಮಾರಂಗವನ್ನೇ. ಓದು ಮೊಟಕುಗೊಳಿಸಿ ಸಿನಿಮಾಗಳಲ್ಲಿ ಅವಕಾಶಕ್ಕಾಗಿ ಹಂಬಲಿಸುತ್ತಿದ್ದ ಅವರಿಗೆ ಮೊದಲು ಸಿಕ್ಕ ಸಿನಿಮಾ ‘ಮಿಸ್ ಇಂಡಿಯಾ’. ದುರದೃಷ್ಟವಶಾತ್ ಒಂದೇ ವಾರಕ್ಕೆ ಆ ಸಿನಿಮಾ ನಿಂತುಹೋಯಿತು. ಅದಾದ ನಂತರ ಪುನೀತ್ ರಾಜಕುಮಾರ್ ಅವರ ಸಿನಿಮಾವೊಂದಕ್ಕೆ ನಿರ್ದೇಶಕರಿಗೆ ಸಹಾಯಕನಾಗಿ ಕೆಲಸ ಮಾಡುವ ಪುಟ್ಟ ಅವಕಾಶ ಸಿಕ್ಕಿತು. ಈ ಅನುಭವಗಳೆಲ್ಲ ಅವರಿಗೆ ಸಣ್ಣ ಪಾಠವಾಗಿ ಒದಗಿಬಂದವು.

ಈ ನಡುವೆ ‘ಮಲೆಗಳಲ್ಲಿ ಮದುಮಗಳು’ ನಾಟಕಕ್ಕೆ ಕಲಾವಿದರ ಅನ್ವೇಷಣೆ ನಡೆಯುತ್ತಿರುವ ವಿಷಯ ತಿಳಿಯಿತು. ‘‘ದುಡ್ಡಿಲ್ಲದ ಕಾರಣ ನಾಟಕದಲ್ಲಿ

# ನಿಶ್ವಿಕಾ ಹೆಜ್ಜೆಯ ಹಿಂದೆ...



ಕಿಚ್ಚ ಸುದೀಪ್ ಅಭಿನಯದ ಬಹುನಿರೀಕ್ಷಿತ ‘ಮಾರ್ಕ್’ ಸಿನಿಮಾದ ‘ಮಸ್ತ್ ಮಲೈಕಾ’ ಹಾಡು ಈಚೆಗೆ ರಿಲೀಸ್ ಆಗಿದ್ದು, ಹಾಡಿನಲ್ಲಿ ಸುದೀಪ್ ಜೊತೆ ನಟಿ ನಿಶ್ವಿಕಾ, ಜಬರ್‌ದಸ್ತ್ ಆಗಿ ಹೆಜ್ಜೆ ಹಾಕಿದ್ದಾರೆ.

ನಟ ಪ್ರಭುದೇವ ಅವರೊಂದಿಗೆ ನಿಶ್ವಿಕಾ ಸ್ಟೆಪ್ ಹಾಕಿದ್ದ ‘ಕರಟಕ ದಮನಕ’ ಸಿನಿಮಾ ‘ಹಿತ್ತಲಕ ಕರಿಬ್ಯಾಡ ಮಾವ’ ಹಾಡು ಕೂಡ ಜನಪ್ರಿಯವಾಗಿತ್ತು.

ವಿಶೇಷ ಹಾಡುಗಳಲ್ಲಿ ಕಾಣಿಸಿಕೊಳ್ಳುತ್ತಿರುವ ನಿಶ್ವಿಕಾ ಅವರಿಗೆ ಸಹಜವಾಗಿಯೇ ಈ ಬಗ್ಗೆ ಪ್ರಶ್ನೆಗಳು ಎದುರಾಗಿವೆ. ಇದಕ್ಕೆ ಉತ್ತರವಾಗಿ, ‘ನಟನೆಯೇ ನನ್ನ ಆದ್ಯತೆ’ ಎಂದು ಹೇಳಿದ್ದಾರೆ ಅವರು.

ಸಂದರ್ಶನವೊಂದರಲ್ಲಿ ಈ ಕುರಿತು ಮಾತನಾಡಿರುವ ಅವರು, ‘ಸ್ಪೆಷಲ್ ಹಾಡುಗಳಿಗೆ ಹೆಜ್ಜೆ ಹಾಕುತ್ತಿದ್ದೇನೆ ಹೌದು. ಆದರೆ ನನ್ನ ಗಮನವೇನಿದ್ದರೂ ನಟನೆ ಮೇಲೆ. ವಿಭಿನ್ನ ಪಾತ್ರಗಳನ್ನು ನಿರ್ವಹಿಸುವುದರ ಮೇಲೆ’ ಎಂದು ಒತ್ತಿ ಹೇಳಿದ್ದಾರೆ.

‘‘ಹಿತ್ತಲಕ ಕರಿಬೇಡ ಮಾವ...’ ಹಾಡಿನಲ್ಲಿ ಕಾಣಿಸಿಕೊಂಡ ಮೇಲೆ ಬೇರೆ ಭಾಷೆಗಳ ದೊಡ್ಡ ದೊಡ್ಡ ಬ್ಯಾನರ್‌ಗಳಿಂದ ಸ್ಪೆಷಲ್ ಹಾಡುಗಳಿಗೆ ನೃತ್ಯಕ್ಕೆ ಅವಕಾಶಗಳು ಬಂದವು. ಅವನ್ನು ನಯವಾಗಿ ತಿರಸ್ಕರಿಸಿದೆ. ನನ್ನ ಸಿನಿಮಾದ ಭಾಗವಾಗಿದ್ದರೆ ನಾನು ನೃತ್ಯ ಮಾಡಬೇಕೆಂದುಕೊಂಡಿದ್ದೆ. ಆದರೆ ‘ಮಾರ್ಕ್’ ಹಾಡಿಗೆ ಹೆಜ್ಜೆ ಹಾಕುವ ಅವಕಾಶ ಬಂದಾಗ, ಸಿನಿಮಾ ಕಥೆಯನ್ನು ಗಮನಿಸಿದೆ. ಹಾಡಿನ ಸಾಹಿತ್ಯವನ್ನು ನೋಡಿದೆ. ಚೆನ್ನಾಗಿದೆ ಎನಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಸುದೀಪ್ ಅವರೊಂದಿಗೆ ಕೆಲಸ ಮಾಡುವ ಅವಕಾಶವನ್ನು ನಾನು ಮಿಸ್ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ’’ ಎಂದು ತಮ್ಮ ಆಯ್ಕೆಯ ಹಿಂದಿನ ಕಾರಣವನ್ನು ವಿವರಿಸಿದ್ದಾರೆ.

‘ನಾನು ಸಿನಿಮಾವನ್ನು ಹೇಗೆ ಆಯ್ಕೆ ಮಾಡುತ್ತೇನೋ ಹಾಗೇ ಹಾಡು ಕೂಡ. ಹಾಡಿನಲ್ಲಿ ಸುಮ್ಮನೆ ಕಾಣಿಸಿಕೊಳ್ಳುವುದಿಲ್ಲ. ಸಿನಿಮಾಗೆ ಅದು ಅವಶ್ಯವಿರಬೇಕು. ನಾನು ಹಾಡಿನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವುದನ್ನು ಪ್ರೇಕ್ಷಕರು ಮೆಚ್ಚಿಕೊಂಡಿದ್ದಾರೆ. ನನ್ನ ಪಾತ್ರಗಳಿಗೂ ಈ ಬೆಂಬಲವನ್ನೇ ನಿರೀಕ್ಷಿಸುತ್ತೇನೆ’ ಎಂದಿದ್ದಾರೆ.

‘ಮಸ್ತ್ ಮಲೈಕಾ’ ಹಾಡಿಗೆ ಸುದೀಪ್ ಜೊತೆ ಹೈ ಎನರ್ಜಿಯಾಗಿ ನಿಶ್ವಿಕಾ ಹೆಜ್ಜೆ ಹಾಕಿದ್ದು, ಅನೂಪ್ ಭಂಡಾರಿ ಸಾಹಿತ್ಯ ಇದಕ್ಕಿದೆ. ಸುದೀಪ್ ಮಗಳು ಸಾನ್ವಿ ಈ ಹಾಡನ್ನು ಹಾಡಿದ್ದಾರೆ. ■